

**ಮೇಷ್ಟ್ರು:** ಆತ್ಮೀಯ ವಿದ್ಯಾರ್ಥಿಗಳೇ ನೀವು ಬೆರಳು ತೋರಿದರೆ ಹಸ್ತ ನುಂಗುವಂತೆ ಇರಬೇಕು.
**ವಿದ್ಯಾರ್ಥಿ:** ನಾನು ಅಪ್ಪಟ ಸಸ್ಯಾಹಾರಿ.

**ಮೇಷ್ಟ್ರು:** ಶಕ್ತಿ ಎಂದರೇನು?
**ವಿದ್ಯಾರ್ಥಿ:** ಮಹಿಳೆಯರಿಗೆ ರಾಜ್ಯದ ಸರಕಾರಿ ಬಸ್ಸುಗಳಲ್ಲಿ ಉಚಿತವಾಗಿ ಸಂಚರಿಸುವ ಯೋಜನೆಯ ಹೆಸರೇ ಶಕ್ತಿ.

ಮದುವೆಯ ಬ್ರೋಕರ್ ಗಂಡಿನ ತಂದೆಗೆ ಫೋನ್ ಮಾಡಿ ಕುಲ, ಗೋತ್ರ ವಿಚಾರಿಸಿಕೊಂಡ ನಂತರ ಹುಡುಗ ಏನ್ ಓದಿದಾನೆ ಅಂತ ಕೇಳಿದರು. ಅದಕ್ಕೆ ಹುಡುಗನ ತಂದೆ 'ಪೇಪರ್ ಓದವ್ನೆ' ಅಂತ ಉತ್ತರ ನೀಡಿದರು.





**ನಂಜುಂಡ:** ಲೋ... ಕೋದಂಡ. ಡಿಗ್ರಿ ಆದ್ಮೇಲೆ ಮಗ ಏನ್ಮಾಡ್ತವ್ನೆ?
**ಕೋದಂಡ:** ಯಾವುದಕ್ಕೂ ಕಾಲ ಕೂಡಿ ಬರ್ಬೇಕು ಅಂತ ಕಾಲ ಕಳೀತಾ ಅವ್ನೆ.




**ಮೇಷ್ಟ್ರು:** ಪ್ರೀತಿಯ ವಿದ್ಯಾರ್ಥಿಗಳೇ ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ, ನಮ್ ಕೈಯಲ್ಲಿ ಏನೂ ಇಲ್ಲ.
**ವಿದ್ಯಾರ್ಥಿ:** ಸಾರ್ ನಿಮ್ಮ ಕೈಯಲ್ಲಿ ಚಾಕ್ ಪೀಸ್ ಇದೆಯಲ್ವ?

**ಮೇಷ್ಟ್ರು:** ವಿನಯ, ಸವರ್ಣದೀರ್ಘ ಸಂಧಿಗೆ ಉತ್ತಮ ಉದಾಹರಣೆ ನೀಡುವೆಯಾ?
**ವಿನಯ:** ನ್ಯಾಯಾಲಯ ಸಾರ್!
**ಮೇಷ್ಟ್ರು:** ಅರ್ಥವಾಗುವಂತೆ ಸ್ವಲ್ಪ ಬಿಡಿಸಿ ಹೇಳ್ತೀಯಾ?
**ವಿನಯ:** ಯಾವುದೇ ದಾವೆ ಇರಲಿ ನ್ಯಾಯಾಲಯಕ್ಕೆ ಹೋದ ಮೇಲೆ ತುಂಬಾ ದೀರ್ಘವಾಗಿ ವರ್ಷಾನುವರ್ಷ ಅಲ್ಲಿ ಎಳೆಯುತ್ತಾರೆ ಸಾರ್ ಅದಕ್ಕೆ.

**ಮೇಷ್ಟ್ರು:** ಕಾಲ ಕೆಟ್ಟು ಹೋಗಿದೆ. ಇದು ಯಾವ ಕಾಲ ಅಂತ ಹೇಳ್ತೀಯಾ ಮುರುಳಿ?
**ಮುರುಳಿ:** ಡೌಟೆ ಇಲ್ಲ, ಇದು ಕೇಡುಗಾಲ ಸರ್!



ನನ್ನನ್ನೇನು ಮೂರ್ಖ ಅಂದುಕೊಂಡ್ರಾ? ಗೃಹಲಕ್ಷ್ಮಿ ಯೋಜನೆಯ ಎರಡು ಸಾವಿರ ನನಗೆ ಸಿಗಲಿ ಅಂತ ಈ ಪ್ಲಾನ್ ಮಾಡಿದೆ.

**ನಂಜುಂಡ:** ಬರೋದು ನಿಮ್ಮಿಷ್ಟ, ಕಳಿಸೋದು ನಮ್ಮಿಷ್ಟ... ಇದು ಯಾರ ಡೈಲಾಗು?
**ಕೋದಂಡ:** ನಂಗೊತ್ತಿಲ್ಲ.
**ನಂಜುಂಡ:** ಆಸ್ಪತ್ರೆಗೆ ಹೋಗೋದು ನಿಮ್ಮಿಷ್ಟ, ಕಳ್ಸೋದು ಡಾಕ್ಟರ್ ಇಷ್ಟ. ಹಾಗಾಗಿ ಇದು ಡಾಕ್ಟರ್ ಡೈಲಾಗು.

ವೇದಿಕೆಯ ಮೇಲೆ ಭಾಷಣ ಮಾಡುತ್ತಿದ್ದ ಮಂಜ, 'ಮರ ಬೆಳೆಸಿ ಪರಿಸರ ಉಳಿಸಿ' ಎಂದು ಘಂಟಾಘೋಷವಾಗಿ ಹೇಳಿದ. ಅದನ್ನು ಕೇಳಿದ ನಂಜ ಹೇಳಿದ್ದು ಹೀಗೆ...
**ನಂಜ:** ಅದರ ಅಗತ್ಯ ಇಲ್ಲ ಸಾರ್!
**ಮಂಜ:** ಯಾಕೆ ಇಲ್ಲ?
**ನಂಜ:** ಮರ ತಾನಾಗಿ ಬೆಳೆಯುತ್ತೆ ಸಾರ್!

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ